All India Radio: Bangalore
National Bulletin In Kannada
25.08.2025  07.35 a.m.
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು
**<><><><>**

ಮುಖ್ಯಾಂಶಗಳು

1. ನವದೆಹಲಿಯಲ್ಲಿಂದು ಫಿಜಿ ಸಹವರ್ತಿಯೊಂದಿಗೆ ಪ್ರಧಾನಿ ನರೇಂದ್ರ ಮೋದಿ ಮಾತುಕತೆ : ದ್ವಿಪಕ್ಷೀಯ ಸಹಕಾರ ವಿಸ್ತರಿಸುವ ನಿರೀಕ್ಷೆ
2. ಗುಜರಾತ್‌ನಲ್ಲಿಂದು ೫ ಸಾವಿರದ ೪೦೦ ಕೋಟಿ ರೂಪಾಯಿಗೂ ಅಧಿಕ ಮೌಲ್ಯದ ವಿವಿಧ ಅಭಿವೃದ್ಧಿ ಯೋಜನೆಗಳಿಗೆ ಚಾಲನೆ ನೀಡಲಿರುವ ಪ್ರಧಾನಿ
3. ಭಾರತದಿಂದ ರಾಷ್ಟ್ರೀಯ ಹಿತಾಸಕ್ತಿಗೆ ಅನುಗುಣವಾಗಿ ತೈಲ ಖರೀದಿ : ರಷ್ಯಾಕ್ಕೆ ಭಾರತೀಯ ರಾಯಭಾರಿ ವಿನಯ್‌ಕುಮಾರ್ ಸ್ಪಷ್ಟನೆ
4. ವಿಶ್ವ ಯುವ ಬಿಲ್ಲುಗಾರಿಕೆ ಚಾಂಪಿಯನ್ ಶಿಪ್ ; ಭಾರತಕ್ಕೆ ೧೮ ವರ್ಷದೊಳಗಿನವರ ಮಹಿಳಾ ವೈಯಕ್ತಿಕ ರಿಕರ್ವ್ ವಿಭಾಗದ ಪ್ರಶಸ್ತಿ

<><><><>

ಪ್ರಧಾನಿ ನರೇಂದ್ರ ಮೋದಿ ಅವರಿಂದು ನವದೆಹಲಿಯಲ್ಲಿ ಫಿಜಿ ಪ್ರಧಾನಮಂತ್ರಿ ಸಿಟಿವೆನಿ ರಬೂಕಾ ಅವರೊಂದಿಗೆ ದ್ವಿಪಕ್ಷೀಯ ಮಾತುಕತೆ ನಡೆಸಲಿದ್ದಾರೆ. ಫಿಜಿ ಪ್ರಧಾನಿ ರಬೂಕಾ ಅವರು, ಮೂರು ದಿನಗಳ ಅಧಿಕೃತ ಭಾರತ ಪ್ರವಾಸಕ್ಕಾಗಿ ನಿನ್ನೆ ನವದೆಹಲಿಗೆ ಆಗಮಿಸಿದರು. ವಿಮಾನ ನಿಲ್ದಾಣದಲ್ಲಿ ಅವರನ್ನು ಕೇಂದ್ರ ಶಿಕ್ಷಣ ಮತ್ತು ಈಶಾನ್ಯ ಪ್ರದೇಶಾಭಿವೃದ್ಧಿ ರಾಜ್ಯ ಸಚಿವ ಸುಕಾಂತ ಮಜುಮ್ದಾರ್ ಆತ್ಮೀಯವಾಗಿ ಬರಮಾಡಿಕೊಂಡರು. ಫಿಜಿ ಪ್ರಧಾನಿ ರಬೂಕಾ ಅವರೊಂದಿಗೆ ಅವರ ಪತ್ನಿ ಸುಲುಎಟಿ ರಬೂಕಾ ಸಹ ಆಗಮಿಸಿದ್ದಾರೆ. ಅವರೊಂದಿಗೆ ಆಗಮಿಸಿರುವ ನಿಯೋಗದಲ್ಲಿ ಆರೋಗ್ಯ ಮತ್ತು ವೈದ್ಯಕೀಯ ಸೇವೆಗಳ ಸಚಿವ ರಾಟು ಅಟೋನಿಯೋ ಲಲಬಾಲಾವು ಹಾಗೂ ಹಿರಿಯ ಅಧಿಕಾರಿಗಳಿದ್ದಾರೆ. ನಿನ್ನೆ ಸಂಜೆ ಕೇಂದ್ರ ಸಚಿವ ಜೆ.ಪಿ ನಡ್ಡಾ, ಫಿಜಿ ಪ್ರಧಾನಿ ಅವರನ್ನು ಭೇಟಿಯಾಗಿ ಮಾತುಕತೆ ನಡೆಸಿದ್ದಾರೆ. ವಿದೇಶಾಂಗ ವ್ಯವಹಾರಗಳ ಸಚಿವಾಲಯ ಪ್ರಕಟಿಸಿರುವ ಮಾಹಿತಿಯ ಪ್ರಕಾರ, ಪ್ರಧಾನಿಯಾಗಿ ಅಧಿಕಾರ ಸ್ವೀಕರಿಸಿದ ಬಳಿಕ, ಸಿಟಿವೆನಿ ರಬೂಕಾ ಅವರ ಮೊದಲ ಅಧಿಕೃತ ಭಾರತ ಭೇಟಿ ಇದಾಗಿದೆ. ಈ ವೇಳೆ ಅವರು

ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ಸಹ ಭೇಟಿ ಮಾಡಲಿದ್ದಾರೆ. ಈ ಭೇಟಿ ಭಾರತ ಮತ್ತು ಫಿಜಿ ನಡುವಿನ ದೀರ್ಘಕಾಲದ ಸಂಬಂಧವನ್ನು ಮತ್ತಷ್ಟು ಬಲಪಡಿಸಲಿದೆ. ಉಭಯ ರಾಷ್ಟ್ರಗಳು ಸಾಂಸ್ಕೃತಿಕ, ರಾಜತಾಂತ್ರಿಕ ಮತ್ತು ಆರ್ಥಿಕ ಕ್ಷೇತ್ರಗಳಲ್ಲಿ ಪರಸ್ಪರ ಸಹಕಾರವನ್ನು ವಿಸ್ತರಿಸಲು ಬದ್ಧವಾಗಿರುವುದನ್ನು ಈ ಭೇಟಿಯು ಪುನರುಚ್ಚರಿಸುತ್ತದೆ.

<><><><>

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಇಂದು ಗುಜರಾತ್‌ಗೆ ಎರಡು ದಿನಗಳ ಪ್ರವಾಸ ಕೈಗೊಳ್ಳಲಿದ್ದಾರೆ.  ಇಂದು ಸಂಜೆ ಅವರು ಅಹಮದಾಬಾದ್‌ನ ಖೋದಲಧಾಮ ಮೈದಾನದಲ್ಲಿ ೫ ಸಾವಿರದ ೪೦೦ ಕೋಟಿ ರೂಪಾಯಿಗೂ ಅಧಿಕ ಮೌಲ್ಯದ ವಿವಿಧ ಅಭಿವೃದ್ಧಿ ಯೋಜನೆಗಳ ಉದ್ಘಾಟನೆ ಮತ್ತು ಶಂಕುಸ್ಥಾಪನೆ ನೆರವೇರಿಸಲಿದ್ದಾರೆ. ಈ ಸಂದರ್ಭದಲ್ಲಿ ಪ್ರಧಾನಿ ಸಾರ್ವಜನಿಕ ಸಭೆಯನ್ನುದ್ದೇಶಿಸಿ ಮಾತನಾಡಲಿದ್ದಾರೆ. ಇಂದು ಉದ್ಘಾಟನೆಗೊಳ್ಳುತ್ತಿರುವ ಯೋಜನೆಗಳು ನಗರಾಭಿವೃದ್ಧಿ, ಇಂಧನ, ರಸ್ತೆ ಮತ್ತು ರೈಲ್ವೆ ಇಲಾಖೆಗೆ ಸಂಬಂಧಿಸಿದ ಯೋಜನೆಗಳಾಗಿವೆ. ಪ್ರವಾಸದ ಎರಡನೇ ದಿನವಾದ ನಾಳೆ, ಹಂಸಲ್ಪುರದಲ್ಲಿ ಪ್ರಧಾನಿ ಹೈಬ್ರಿಡ್ ಬ್ಯಾಟರಿ ಎಲೆಕ್ಟ್ರೋಡ್‌ಗಳ ಸ್ಥಳೀಯ ಉತ್ಪಾದನೆಗೆ ಚಾಲನೆ ನೀಡಲಿದ್ದು, ೧೦೦ ದೇಶಗಳಿಗೆ ಬ್ಯಾಟರಿ ಎಲೆಕ್ಟ್ರಿಕ್ ವಾಹನಗಳ ರಫ್ತಿಗೆ ಹಸಿರು ನಿಶಾನೆ ತೋರಿಸಲಿದ್ದಾರೆ.

ಪ್ರಧಾನಿ ಪ್ರವಾಸದ ಕುರಿತು ಒಂದು ವರದಿ:

ವರದಿ:  ಅಭಯ್ ( ೧ ನಿಮಿಷ ೨ ಸೆಕೆಂಡ್‌ಗಳು)

ಜಾಗತಿಕ ಮಟ್ಟದ ಮೂಲಸೌಕರ್ಯ ಮತ್ತು ಸಂಪರ್ಕ ಸಾಧಿಸುವ ಸರ್ಕಾರದ ದೃಷ್ಟಿಕೋನಕ್ಕೆ ಪೂರಕವಾಗಿ, ೧ ಸಾವಿರದ ೪೦೦ ಕೋಟಿ ರೂಪಾಯಿಗೂ ಅಧಿಕ ಮೌಲ್ಯದ ಹಲವು ರೈಲ್ವೆ ಯೋಜನೆಗಳನ್ನು ಪ್ರಧಾನಿ ರಾಷ್ಟ್ರಕ್ಕೆ ಸಮರ್ಪಿಸಲಿದ್ದಾರೆ. ಇದರಲ್ಲಿ ೬೫ ಕಿಮೀ ಉದ್ದದ ಮಹೆಸಾನಾ-ಪಾಲನ್ಪುರ್ ರೈಲು ಮಾರ್ಗದ ದ್ವಿಗುಣೀಕರಣ, ಕಲೋಲ್-ಕಡಿ-ಕಟೋಸನ್ ರಸ್ತೆ ಮತ್ತು ಬೆಚರಾಜಿ-ರಣುಜ್ ರೈಲು ಮಾರ್ಗಗಳ ಗೇಜ್ ಉನ್ನತೀಕರಣ ಸೇರಿದೆ. ಇದು ಉತ್ತರ ಗುಜರಾತಿನಲ್ಲಿ ಸುರಕ್ಷಿತ ಮತ್ತು ಸುಗಮ ಸಂಚಾರಕ್ಕೆ ಸಹಕಾರಿಯಾಗಲಿದೆ. ಕಟೋಸನ್ ರಸ್ತೆ ಮತ್ತು ಸಾಬರಮತಿ ನಡುವೆ ಪ್ಯಾಸೆಂಜರ್ ರೈಲಿಗೆ ಹಸಿರು ನಿಶಾನೆ ತೋರಲಿರುವ ಪ್ರಧಾನಿ,

ಬೆಚರಾಜಿಯಿಂದ ಸರಕು ರೈಲು ಸೇವೆಯನ್ನೂ ಪ್ರಾರಂಭಿಸಲಿದ್ದಾರೆ. ಇದರ ಜೊತೆಗೆ ವಿರಾಮಗಾಮ್-ಖುದಾದ್-ರಾಂಪುರ ರಸ್ತೆಯ ಅಗಲೀಕರಣ ಹಾಗೂ ಅಹಮದಾಬಾದ್-ಮಹೆಸಾನಾ-ಪಾಲನ್ಪುರ್ ಮಾರ್ಗದಲ್ಲಿ ಷಟ್ಪಥ ಕೆಳಸೇತುವೆಗಳ ಶಂಕುಸ್ಥಾಪನೆ ನೆರವೇರಿಸಲಿದ್ದು, ಅಹಮದಾಬಾದ್-ವಿರಾಮಗಾಮ್ ರಸ್ತೆಯಲ್ಲಿ ರೈಲು ಮೇಲ್ಸೇತುವೆಯ ನಿರ್ಮಾಣಕ್ಕೂ ಚಾಲನೆ ನೀಡಲಿದ್ದಾರೆ. ಈ ಎಲ್ಲಾ ಉಪಕ್ರಮಗಳು ಪ್ರದೇಶದಲ್ಲಿ ಕೈಗಾರಿಕಾ ಬೆಳವಣಿಗೆಗೆ ವೇಗ ನೀಡಿ, ಸಾರಿಗೆ ಸಾಮರ್ಥ್ಯವನ್ನು ಹೆಚ್ಚಿಸಿ, ಹೊಸ ಆರ್ಥಿಕ ಅವಕಾಶಗಳನ್ನು ಸೃಜಿಸಲಿವೆ.

<><><><>

ಗ್ರೂಪ್ ಕ್ಯಾಪ್ಟನ್ ಶುಭಾಂಶು ಶುಕ್ಲಾ ಅವರನ್ನು ಇಂದು ಅವರ ತವರೂರಾದ ಲಖನೌದಲ್ಲಿ ಭವ್ಯ ಸ್ವಾಗತ ನೀಡಲು ಎಲ್ಲಾ ಸಿದ್ಧತೆಗಳು ಪೂರ್ಣಗೊಂಡಿವೆ. ಗ್ರೂಪ್ ಕ್ಯಾಪ್ಟನ್ ಶುಭಾಂಶು ಶುಕ್ಲಾ ಅವರ ಶಾಲೆಯು ವಿಮಾನ ನಿಲ್ದಾಣದಿಂದ ನಗರದ ಗೋಮತಿ ನಗರ ಪ್ರದೇಶದವರೆಗೆ ವಿಜಯೋತ್ಸವ ಮೆರವಣಿಗೆಯನ್ನು ಆಯೋಜಿಸಿ, ಸನ್ಮಾನ ಸಮಾರಂಭವನ್ನು ಹಮ್ಮಿಕೊಂಡಿದೆ. ಈ ವೇಳೆ ೬೩ ಸಾವಿರ ವಿದ್ಯಾರ್ಥಿಗಳು ಅವರನ್ನು ಗೌರವಿಸಲು ಮೆರವಣಿಗೆಯಲ್ಲಿ ಭಾಗವಹಿಸಲಿದ್ದಾರೆ. ಉತ್ತರಪ್ರದೇಶ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯು ಸಹ ಭವ್ಯ ಸಮಾರಂಭವನ್ನು ಆಯೋಜಿಸುತ್ತಿದೆ. ಆ ವೇಳೆ, ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಗ್ರೂಪ್ ಕ್ಯಾಪ್ಟನ್ ಶುಭಾಂಶು ಶುಕ್ಲಾ ಅವರನ್ನು ಸನ್ಮಾನಿಸಲಿದ್ದಾರೆ. ಬಾಹ್ಯಾಕಾಶದಲ್ಲಿ ಭಾರತದ ಧ್ವಜವನ್ನು ಹಾರಿಸುವುದು ಪ್ರತಿಯೊಬ್ಬ ನಾಗರಿಕನಿಗೂ ಹೆಮ್ಮೆಯ ವಿಷಯವಾಗಿದೆ ಮತ್ತು ಶುಭಾಂಶು ಅವರನ್ನು ಗೌರವಿಸುವುದು ಭವಿಷ್ಯದ ಪೀಳಿಗೆಗೆ ದೊಡ್ಡ ಕನಸು ಕಾಣಲು ಮತ್ತು ಆ ಕನಸುಗಳನ್ನು ನನಸಾಗಿಸಲು ಪ್ರೇರಣೆ ನೀಡುತ್ತದೆ ಎಂದು ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಹೇಳಿದ್ದಾರೆ. ಬಾಹ್ಯಾಕಾಶ ಯಾನದ ಕುರಿತು ಮಾತನಾಡಿರುವ ಶುಭಾಂಶು ಶುಕ್ಲಾ, ಭಾರತ ತನ್ನ ಮಾನವಸಹಿತ ಬಾಹ್ಯಾಕಾಶ ಯಾನ ಗಗನಯಾನ ಯೋಜನೆ, ಭಾರತೀಯ ಬಾಹ್ಯಾಕಾಶ ನಿಲ್ದಾಣ ಮತ್ತು ಚಂದ್ರನ ಮೇಲೆ ಲ್ಯಾಂಡಿಂಗ್ ಮಾಡುವ ಗುರಿಯತ್ತ ಸಾಗುತ್ತಿದೆ. ಇತ್ತೀಚೆಗೆ ಪೂರ್ಣಗೊಳಿಸಿದ ಬಾಹ್ಯಾಕಾಶ ಯಾನದ ಮೂಲಕ ದೊರೆತ ಪಾಠಗಳು ಅನನ್ಯವಾಗಿದ್ದು, ಭಾರತದ ಮುಂದಿನ ಯೋಜನೆಗಳನ್ನು ಯಶಸ್ವಿಯಾಗಿ ನಿರ್ವಹಿಸಲು ನಿರ್ಣಾಯಕವಾಗಿವೆ ಎಂದು ಹೇಳಿದ್ದಾರೆ.

ಧ್ವನಿ : ಶುಭಾಂಶು ಶುಕ್ಲಾ (೨೨ ಸೆಕೆಂಡ್‌ಗಳು)

<><><><>

ಭಾರತ, ತನ್ನ ರಾಷ್ಟ್ರೀಯ ಹಿತಾಸಕ್ತಿಯನ್ನು ರಕ್ಷಿಸುವುದಕ್ಕಾಗಿ ಯಾವ ಮೂಲದಿಂದ ಉತ್ತಮ ದರಕ್ಕೆ ತೈಲ ದೊರಕುತ್ತದೆಯೋ ಅಲ್ಲಿಂದಲೇ ತೈಲ ಖರೀದಿ ಮಾಡುವುದನ್ನು ಮುಂದುವರಿಸಲಿದೆ ಎಂದು ರಷ್ಯಾಕ್ಕೆ ಭಾರತದ ರಾಯಭಾರಿ ವಿನಯ್ ಕುಮಾರ್ ತಿಳಿಸಿದ್ದಾರೆ. ರಷ್ಯಾದ ಸುದ್ದಿ ಸಂಸ್ಥೆಯೊಂದಕ್ಕೆ ನೀಡಿದ ಸಂದರ್ಶನದಲ್ಲಿ ಅವರು, ಭಾರತ-ರಷ್ಯಾದಿಂದ ತೈಲ ಖರೀದಿ ಮಾಡುತ್ತಿರುವ ಹಿನ್ನೆಲೆಯಲ್ಲಿ ಅಮೆರಿಕ ಭಾರತೀಯ ಆಮದು ವಸ್ತುಗಳ ಮೇಲೆ ಶೇಕಡ ೨೫ ರಷ್ಟು ಸುಂಕ ಹೆಚ್ಚಳ ಮಾಡಿ, ಒಟ್ಟು ಸುಂಕ ಶೇಕಡ ೫೦ ರಷ್ಟು ಮಾಡಲು ತೆಗೆದುಕೊಂಡ ನಿರ್ಧಾರವನ್ನು ಅನ್ಯಾಯ, ಅನುಚಿತ ಮತ್ತು ಸಮರ್ಥನೀಯವಲ್ಲದ ಒಂದು ಕ್ರಮವೆಂದು ಬಣ್ಣಿಸಿದ್ದಾರೆ. ಭಾರತದ ಇಂಧನ ನೀತಿ ಕುರಿತು ಮಾತನಾಡಿದ ಅವರು, ರಷ್ಯಾ ಮತ್ತು ಇತರ ದೇಶಗಳೊಂದಿಗೆ ಇಂಧನ ಸಹಕಾರದಿಂದ ಜಾಗತಿಕ ತೈಲ ಮಾರುಕಟ್ಟೆಯಲ್ಲಿ ಸ್ಥಿರತೆ ಮೂಡಿದೆಯೆಂದು ಅವರು ಸ್ಪಷ್ಟಪಡಿಸಿದರು. ಭಾರತ-ರಷ್ಯಾ ನಡುವಿನ ವ್ಯಾಪಾರ ಪರಸ್ಪರ ಹಿತಾಸಕ್ತಿಗಳ ಮೇಲೆ ಆಧಾರಿತವಾಗಿದೆ ಎಂದು ಅವರು, ಅಮೆರಿಕ ಮತ್ತು ಯುರೋಪ್ ರಾಷ್ಟ್ರಗಳೂ ಸಹ ರಷ್ಯಾದೊಂದಿಗೆ ವ್ಯಾಪಾರ ಮುಂದುವರೆಸುತ್ತಿವೆ ಎಂಬುದನ್ನು ಅವರು ಪುನರುಚ್ಚರಿಸಿದರು.

<><><><>

ಇಂಡೋ-ಬಾಂಗ್ಲಾದೇಶ ಗಡಿಯಲ್ಲಿರುವ ಹಕೀಂಪುರ ಚೆಕ್‌ಪೋಸ್ಟ್ ಮೂಲಕ ಭಾರತಕ್ಕೆ ಅಕ್ರಮವಾಗಿ ಪ್ರವೇಶಿಸಲು ಯತ್ನಿಸುತ್ತಿದ್ದ ಬಾಂಗ್ಲಾದೇಶದ ಉನ್ನತ ಅಧಿಕಾರಿಯನ್ನು ಗಡಿ ರಕ್ಷಣಾಪಡೆ - ಬಿಎಸ್‌ಎಫ್ ಬಂಧಿಸಿದೆ. ಶೇಕ್ ಹಸಿನಾ ಅವರ ಆಡಳಿತಾವಧಿಯಲ್ಲಿ ಎಂಡಿ ಅರಿಫುಜ್ಜಮಾನ್ ರಂಗ್ಪುರ್ ಮೆಟ್ರೋಪಾಲಿಟನ್ ಸಹಾಯಕ ಪೊಲೀಸ್ ಆಯುಕ್ತ ಹಾಗೂ ಸೇನಾ ಕಾರ್ಯದರ್ಶಿಯಾಗಿದ್ದರು. ನಂತರ ಬಾಂಗ್ಲಾದೇಶದಲ್ಲಿ ಯೂನುಸ್ ಸರ್ಕಾರ ಅಧಿಕಾರಕ್ಕೆ ಬಂದಾಗ ಅವರು ಸತ್ಖಿರಾದಲ್ಲಿ ತಲೆಮರೆಸಿಕೊಂಡರು. ಮಳೆ ಮತ್ತು ನೈಸರ್ಗಿಕ ವಿಕೋಪಗಳ ಲಾಭ ಪಡೆದು, ನಿನ್ನೆ ರಾತ್ರಿ ಗಡಿ ದಾಟಲು ಪ್ರಯತ್ನಿಸಿದಾಗ ಬಿಎಸ್‌ಎಫ್‌ನ ೧೪೩ನೇ ಬೆಟಾಲಿಯನ್‌ನ ಸೈನಿಕರು ಅವರನ್ನು ಬಂಧಿಸಿ ಸ್ವರೂಪ್ನಗರ ಪೊಲೀಸ್ ಠಾಣೆಗೆ ಹಸ್ತಾಂತರಿಸಿದರು. ಎಂಡಿ ಅರಿಫುಜ್ಜಮಾನ್ ಅವರಿಂದ ಕೆಲವು ದಾಖಲೆಗಳನ್ನು

ವಶಪಡಿಸಿಕೊಳ್ಳಲಾಗಿದೆ. ಬಸಿರ್ಹತ್ ನ್ಯಾಯಾಲಯವು ಇಂದು ಅವರನ್ನು ೧೪ ದಿನಗಳ ಜೈಲು ಕಸ್ಟಡಿಗೆ ಕಳುಹಿಸಿದ್ದು, ಬಾಂಗ್ಲಾದೇಶ ಹೈಕಮಿಷನ್‌ಗೆ ಈ ವಿಷಯ ತಿಳಿಸಲಾಗಿದೆ.

<><><><>

ಶ್ರೀ ರಾಮ ಜನ್ಮಭೂಮಿ ತೀರ್ಥ ಕ್ಷೇತ್ರ ಟ್ರಸ್ಟ್‌ನ ಸದಸ್ಯ ಮತ್ತು ರಾಜಸದನ ಅಯೋಧ್ಯೆಯ ಮುಖ್ಯಸ್ಥ ವಿಮಲೇಂದ್ರ ಮೋಹನ್ ಪ್ರತಾಪ್ ಮಿಶ್ರಾ ಅವರ ನಿಧನಕ್ಕೆ ಪ್ರಧಾನಿ ನರೇಂದ್ರ ಮೋದಿ ಸಂತಾಪ ಸೂಚಿಸಿದ್ದಾರೆ. ಸಾಮಾಜಿಕ ಜಾಲತಾಣದಲ್ಲಿ, ಪ್ರಧಾನ ಮಂತ್ರಿ ಅವರು, ಧಾರ್ಮಿಕ ಮತ್ತು ಸಾಮಾಜಿಕ ಸೇವೆಗಾಗಿ ಮಿಶ್ರಾ ಅವರ ಸಮರ್ಪಣೆಯನ್ನು ಸ್ಮರಿಸಿದ್ದಾರೆ.

<><><><>

೨೦೪೭ ರ ವೇಳೆಗೆ ಭಾರತವು ವಿಶ್ವದ ಐದು ಅಗ್ರ ಕ್ರೀಡಾ ರಾಷ್ಟ್ರಗಳಲ್ಲಿ ಒಂದಾಗಬೇಕೆಂದು ಕ್ರೀಡಾ ಸಚಿವ ಮನ್ಸುಖ್ ಮಾಂಡವಿಯಾ ಆಶಯ ವ್ಯಕ್ತಪಡಿಸಿದ್ದಾರೆ. ಅಹಮದಾಬಾದ್‌ನಲ್ಲಿ ನಡೆದ ಕಾಮನ್‌ವೆಲ್ತ್ ವೇಟ್‌ಲಿಫ್ಟಿಂಗ್ ಚಾಂಪಿಯನ್‌ಶಿಪ್‌ನ ಉದ್ಘಾಟನಾ ಸಮಾರಂಭವನ್ನುದ್ದೇಶಿಸಿ ಮಾತನಾಡಿದ ಅವರು, ಪ್ರಧಾನಿ ನರೇಂದ್ರ ಮೋದಿಯವರ ನಾಯಕತ್ವದಲ್ಲಿ ಭಾರತವು ಕ್ರೀಡಾ ಕ್ಷೇತ್ರದಲ್ಲಿ ಭಾರಿ ಪ್ರಗತಿ ಸಾಧಿಸಿದೆ ಮತ್ತು ಈ ಕ್ಷೇತ್ರದಲ್ಲಿ ಹಲವು ಸುಧಾರಣೆಗಳನ್ನು ಪರಿಚಯಿಸಲಾಗಿದೆ ಎಂದರು.

<><><><>

ಕೆನಡಾದ ವಿನ್ನಿಪೆಗ್‌ನಲ್ಲಿ ನಿನ್ನೆ ನಡೆದ-೨೦೨೫ರ ವಿಶ್ವ ಯುವ ಬಿಲ್ಲುಗಾರಿಕೆ ಚಾಂಪಿಯನ್ ಶಿಪ್‌ನಲ್ಲಿ ಭಾರತದ ಶಾರ್ವರಿ ಸೋಮನಾಥ್ ಶೆಂಡೆ, ೧೮ ವರ್ಷದೊಳಗಿನವರ ಮಹಿಳಾ ವೈಯಕ್ತಿಕ ರಿಕರ್ವ ವಿಭಾಗದ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡಿದ್ದಾರೆ. ಅವರು, ದಕ್ಷಿಣ ಕೋರಿಯಾದ ಕಿಮ್ ಯೆವಾನ್ ವಿರುದ್ಧ ೬-೫ ಅಂತರದಲ್ಲಿ ಗೆಲುವು ದಾಖಲಿಸಿದರು. ಶೆಂಡೆಯವರು ಪ್ರಸ್ತುತ ನಡೆಯುತ್ತಿರುವ ಪಂದ್ಯಾವಳಿಯಲ್ಲಿ ಚಿನ್ನ ಗೆದ್ದ ೨ನೇ ಭಾರತೀಯ ಮಹಿಳೆಯಾಗಿದ್ದಾರೆ. ಇದಕ್ಕೂ ಮುನ್ನ ಶನಿವಾರ, ಚಿಕಿತ ತನಿ ಪರ್ತಿ ೨೧ ವರ್ಷದೊಳಗಿನವರ ಮಹಿಳಾ ಕಂಪೌಂಡ್ ವೈಯಕ್ತಿಕ ಪ್ರಶಸ್ತಿಯನ್ನು ತಮ್ಮದಾಗಿಸಿಕೊಂಡಿದ್ದರು.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>